(ಸಾಕ್ಷಿಯನ್ನು ದಿನಾಂಕಃ 16.01.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ವಾದಿ ಪರಃ ಶ್ರೀ  ಕೆ ಸಿ ಕೆ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರವನ್ನು ಸಲ್ಲಿಸುತ್ತಿದ್ದು, ಪ್ರಮಾಣಪತ್ರಿಕೆಯಲ್ಲಿ ಬರೆಸಿರುವ ವಿಷಯಗಳೆಲ್ಲವೂ ಸತ್ಯವಾಗಿದೆ.  ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿದ್ದೇನೆ.

ದಿನಾಂಕಃ 05.09.2017 ರ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ. 1 ಎಂದು,  ಸದರೀ ಕರಾರು ಪತ್ರಕ್ಕೆ ಪ್ರತಿವಾದಿಗಳು ಮತ್ತು ನಾನು ಸಹಿ ಮಾಡಿರುತ್ತೇನೆ. ವಾದಿಯ  ಸಹಿಯನ್ನು ನಿ.ಪಿ. 1(ಎ) ಎಂದು, ಪ್ರತಿವಾದಿ 1 ರವರ ಸಹಿಯನ್ನು ನಿ.ಪಿ. 1(ಬಿ), ಪ್ರತಿವಾದಿ 2 ರವರ ಸಹಿಯನ್ನು ನಿ.ಪಿ. 1(ಸಿ) ಎಂದು ಗುರುತಿಸಲಾಯಿತು.  ಸದರೀ ಕರಾರು ಪತ್ರಕ್ಕೆ ಮುತ್ತುಲಿಂಗ  ಮತ್ತು ಸುರೇಶ್ ರವರು ಸಾಕ್ಷಿ ದಾರರಾಗಿ ಸಹಿ ಮಾಡಿರುತ್ತಾರೆ.  ಸದರೀ ಕರಾರು ಪತ್ರವನ್ನು ಹೆಚ್ ಡಿ ಬೆಟ್ಟೇಗೌಡರವರು ಬರೆದಿರುತ್ತಾರೆ.  ಲೀಗಲ್ ನೋಟೀಸ್ ನ್ನು ನಿ.ಪಿ. 2 ಎಂದು, ನಾಲ್ಕು ಅಂಚೆ ರಶೀದಿಗಳನ್ನು ನಿ.ಪಿ. 3 ರಿಂದ 6 ಎಂದು,  ಮೂರು ಅಂಚೆ ಸ್ವೀಕೃತಿಗಳನ್ನು ನಿ.ಪಿ. 7 ರಿಂದ 9 ಎಂದು, ಪ್ರತಿವಾದಿ 2 ರವರಿಗೆ ಜಾರಿಯಾಗದೇ ವಾಪಸ್ಸಾಗಿರುವ ಅಂಚೆ ಲಕೋಟೆಯನ್ನು ನಿ.ಪಿ. 10 ಎಂದು, ಅದರಲ್ಲಿನ ಪ್ರತಿಯನ್ನು ನಿ.ಪಿ. 10(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.